# ಸತ್ಯ 'ಫ್ಯಾಂಟಸಿ' ಸೂತ್ರ

■ ಸುಮಲತಾ ಎನ್‌.

ಕನ್ನಡ ಚಿತ್ರರಂಗದಲ್ಲಿ ಭಿನ್ನ ಧಾಟಿಯ ಸಿನಿಮಾಗಳ ಮೂಲಕ ಗುರುತು ಮೂಡಿಸಿರುವ ನಿರ್ದೇಶಕ ಡಿ. ಸತ್ಯಪ್ರಕಾಶ್, ಮತ್ತೊಂದು ಸಿನಿಮಾ ನಿರ್ದೇಶನದ ತಯಾರಿಯಲ್ಲಿದ್ದಾರೆ. ನಿರ್ದೇಶನದ ಜೊತೆಗೆ ತೆರೆಯ ಮೇಲೂ ಕಾಣಿಸಿಕೊಳ್ಳುತ್ತಿದ್ದಾರೆ. ತಮ್ಮ 'ರಾಮಾ ರಾಮಾ ರೇ', 'ಒಂದಲ್ಲಾ ಎರಡಲ್ಲಾ', 'ಮ್ಯಾನ್ ಆಫ್ ದಿ ಮ್ಯಾಚ್' ಚಿತ್ರಗಳಿಗಿಂತ ಪ್ರೇಕ್ಷಕರಿಗೆ ಭಿನ್ನ ಅನುಭವವೊಂದನ್ನು ಈ ಸಿನಿಮಾ ನೀಡಲಿದೆ ಎಂದು ಭರವಸೆ ನೀಡುವ ಅವರು, ತಮ್ಮ ನೂತನ ಚಿತ್ರ ಹಾಗೂ ಸಿನಿಮಾರಂಗದ ಸದ್ಯದ ಆಗುಹೋಗುಗಳ ಕುರಿತ ವಿಚಾರಗಳನ್ನು 'ಸುಧಾ' ಜೊತೆಗೆ ಹಂಚಿಕೊಂಡಿದ್ದಾರೆ.

◆ **ಹೊಸ ಸಿನಿಮಾ ಹೊಸದಾಗಿ ಏನು ಹೇಳಲು ಹೊರಟಿದೆ?**

ಇದು ಫ್ಯಾಂಟಸಿ ಸಿನಿಮಾ ಎಂಬುದೇ ಹೊಸತು. ಸಿನಿಮಾ ಹೆಸರು 'ಎಕ್ಸ್ ಅಂಡ್ ವೈ'. ಬದುಕು ಎಷ್ಟು ದೊಡ್ಡದು, ಅದೆಷ್ಟು ಸುಂದರ ಎನ್ನುವ ವಿಷಯದ ಮೇಲೆ ಇಡೀ ಸಿನಿಮಾ ನಿಂತಿದೆ. ಹಾಸ್ಯದಲ್ಲಿಯೇ ಬದುಕಿನ ಪ್ರಮುಖ ಘಟ್ಟಗಳ ಹಲವು ಸಂಗತಿಗಳನ್ನು ಹೇಳುತ್ತಾ ಹೋಗುವುದು ಪ್ರೇಕ್ಷಕರಿಗೆ ಇಷ್ಟವಾಗಲಿದೆ.

◆ **ನಿರ್ದೇಶನದೊಂದಿಗೆ ನಟನೆಗೂ ಕಾಲಿಟ್ಟ ಹಿಂದಿನ ಕಥೆ?**

ಈ ಸಿನಿಮಾದಲ್ಲಿ ನಿರ್ದೇಶನದೊಂದಿಗೆ ನಟನೆಯನ್ನೂ ಮಾಡುತ್ತಿದ್ದೇನೆ. ಆದರೆ ಇದು ಹೀರೊಯಿಕ್ ಪಾತ್ರದಂತಲ್ಲ. ನನ್ನ ಮೊದಲ ಒಲವು ಯಾವಾಗಲೂ ಬರವಣಿಗೆ ಹಾಗೂ ನಿರ್ದೇಶನ. ಈ ಸಿನಿಮಾ ಕಥೆ ಮಾಡುತ್ತಿದ್ದಾಗ ಈ ಪಾತ್ರ ನನ್ನ ಜೀವನಕ್ಕೆ ಸ್ವಲ್ಪ ಹೊಂದಿಕೆಯಾಗುತ್ತದೆ ಅನ್ನಿಸುತ್ತಿತ್ತು. ನನ್ನ ಜೊತೆಯಿದ್ದವರೂ ಈ ಪಾತ್ರವನ್ನು ನಾನೇ ಮಾಡಿದರೆ ಚೆನ್ನಾಗಿರುತ್ತದೆ ಎಂದರು. ಹೀಗಾಗಿ ನಟನೆಗೆ ಮನಸ್ಸು ಮಾಡಿದೆ.

◆ **ನಿಮ್ಮ ಹಿಂದಿನ ಸಿನಿಮಾಗಳಿಗಿಂತ 'ಎಕ್ಸ್ ಅಂಡ್ ವೈ'ನಲ್ಲಿ ಯಾವ ರೀತಿಯ ಹೊಸ ಪ್ರಯೋಗವಿದೆ?**

ಹೊಸದೇನನ್ನೋ ನೀಡಬೇಕೆನ್ನುವ ಹಂಬಲದೊಂದಿಗೇ ಪ್ರತಿ ಸಿನಿಮಾ ಮಾಡುತ್ತೇನೆ. ಈ ಸಿನಿಮಾದಲ್ಲಿ ಫ್ಯಾಂಟಸಿ (ಕಾಲ್ಪನಿಕ) ಎಂಬ ಹೊಸ ಸೂತ್ರವಿದೆ. ಮಕ್ಕಳಿಂದ ಹಿಡಿದು ವಯೋವೃದ್ಧರೂ ನನ್ನ ಸಿನಿಮಾ ನೋಡಬೇಕೆಂಬ ಬಯಕೆ ನನ್ನದು. ಆ ಸೂಕ್ಷ್ಮತೆ ಇಟ್ಟುಕೊಂಡು ಸ್ಕ್ರೀನ್ ಪ್ಲೇ, ಪಾತ್ರಗಳನ್ನು ಬರೆಯುತ್ತಿದ್ದೇನೆ. ನನ್ನ ಹಿಂದಿನ ಮೂರು ಸಿನಿಮಾಗಳಿಗೆ ಹೋಲಿಸಿದರೆ ಇದು ಬೇರೆಯದೇ ಥರದ್ದು.

◆ **ಒಟಿಟಿಯಲ್ಲಿ ಕನ್ನಡ ಚಿತ್ರಗಳ ಹಿನ್ನಡೆಗೆ ಕಾರಣವೇನಿರಬಹುದು?**

ಕಾರ್ಪೊರೇಟ್ ವಲಯ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟ ಮೇಲೆ ಬಿಸಿನೆಸ್ ಎಂದೇ ಆಗಿದೆ. ಈ ವ್ಯವಹಾರದಂತೆ ಲೆಕ್ಕಾಚಾರ ಹಾಕಿದರೆ, ಕನ್ನಡ ಭಾಷಿಗರು ತಮಿಳು, ತೆಲುಗು, ಮಲೆಯಾಳಂ, ಹಿಂದಿ ಹೀಗೆ ಬೇರೆ ಭಾಷೆಯ ಸಿನಿಮಾಗಳನ್ನು ನೋಡುತ್ತಾರೆ. ಕನ್ನಡ ಸಿನಿಮಾಗಳನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಂಡರೆ ವೀಕ್ಷಕರ ಸಂಖ್ಯೆ ಕಡಿಮೆಯೇ ಆಗಿರುತ್ತದೆ. ಆದರೆ ಕನ್ನಡ ಸಿನಿಮಾಗಳನ್ನು ಅಲ್ಲಿ ಗೆಲ್ಲಿಸಲು, ಫಿಲ್ಮ್ ಮೇಕರ್‌ಗಳಾಗಿ ನಾವು ಮಾಡಬೇಕಾಗಿರುವುದು ನಿರಂತರವಾಗಿ ಒಳ್ಳೆಯ ಸಿನಿಮಾಗಳನ್ನು ಕೊಟ್ಟು ಜನರಿಗೆ ಅಭ್ಯಾಸ ಮಾಡಿಸುವುದು. ವರ್ಷಕ್ಕೆ 8–10 ಅತ್ಯುತ್ತಮ ಕಂಟೆಂಟ್‌ಗಳನ್ನು ಕೊಡಬೇಕು.

ಮಲೆಯಾಳಂ, ತಮಿಳು ಸಿನಿಮಾರಂಗದಲ್ಲಿ ಇದು ಕಾಣುತ್ತಿದೆ. ಕನ್ನಡದಲ್ಲಿ ಪ್ರಯತ್ನ ಮಾಡುತ್ತಿದ್ದರೂ ಅಷ್ಟು ಯಶಸ್ವಿಯಾಗುತ್ತಿಲ್ಲ. ಹೀಗಾಗಿ ಕಲಾವಿದರು, ತಂತ್ರಜ್ಞರು ಎಲ್ಲರೂ ತಪಸ್ಸಿನಂತೆ ಈ ಕೆಲಸ ಮಾಡಬೇಕು. ಹೊಸ ಕಂಟೆಂಟ್‌ಗಳ ಬಗ್ಗೆ, ಕಡಿಮೆ ಬಜೆಟ್‌ನಲ್ಲಿ ಒಳ್ಳೆಯ ಸಿನಿಮಾ ನಿರ್ಮಾಣದ ಬಗ್ಗೆ, ಹೆಚ್ಚು ಜನಕ್ಕೆ ಸಿನಿಮಾಗಳನ್ನು ತಲುಪಿಸುವ ಕುರಿತು ಆಲೋಚಿಸಬೇಕು.

◆ **ಕೊರೊನಾ ನಂತರದ ಕಾಲದಲ್ಲಿ ಸಿನಿಮಾರಂಗ ಕಂಡಿರುವ ಸವಾಲೇನು?**

